## ಇಲ್ಲಿಯವರೆಗೆ



ನಾಗಮ್ಮನ ಮಗಳು ಪೂರ್ಣಿಮಾಳಿಗೆ ಮದುವೆಗಾಗಿ ಹುಡುಗ ಗೊತ್ತು ಮಾಡಿದ ಮೇಲೆ ಮಗ ಅನಂತ ಪದ್ಮನಾಭನ ಮೂಲಕ ತಂದೆ ರಾಮಚಂದ್ರಪ್ಪನವರ ಮನೆಗೆ ದೌತ್ಯ ಹೊತ್ತು ಕಳಿಸುತ್ತಾಳೆ ನಾಗಮ್ಮ. ಹುಟ್ಟಿದಾರಭ್ಯ ತನ್ನ ತಂದೆಯನ್ನೇ ನೋಡಿರದ ಪದ್ಮನಾಭ ಮೂರು ಗಂಟೆಗಳ ಪ್ರಯಾಣ ಮಾಡಿ ತಂದೆ ಮನೆಗೆ ಹೋಗುತ್ತಾನೆ. ಮಗನನ್ನು ನೋಡಿ ಖುಷಿಯಾದ ಅಪ್ಪ ಪದ್ಮನಾಭ ಹೋದ ಕೂಡಲೇ ಸ್ಟೀಲ್ ತಟ್ಟೆಯಲ್ಲಿ ಬಾಳೆಹಣ್ಣು ಸಕ್ಕರೆ ತುಪ್ಪ ತಂದಿಟ್ಟು ಉಪಚಾರ ಮಾಡುತ್ತಾನೆ. ಮಧ್ಯಾಹ್ನದ ಹೊತ್ತಾದ್ದರಿಂದ ಅಡುಗೆ ಮಾಡಿ ಊಟವನ್ನೂ ಪ್ರೀತಿಯಿಂದ ಬಡಿಸುತ್ತಾನೆ. ಅಪ್ಪ ಅಮ್ಮ ಬೇರೆ ಮನೆಯಲ್ಲಿ ವಾಸ ಮಾಡಿ 17 ವರ್ಷ ಆಗಿರುತ್ತದೆ. ಇದೀಗ ಮಗಳ ಮದುವೆ ಸಲುವಾಗಿ ಮದುವೆಗೆ ಬಂದು ಹರಸುವಂತೆ ಕೇಳಿಕೊಳ್ಳಲು ಪದ್ಮನಾಭ ಅಪ್ಪನನ್ನು ಭೇಟಿಯಾಗಲು ಹೋಗಿರುತ್ತಾನೆ.

ಋಣಾನುಬಂಧ ಇಲ್ಲ' ಎಂದು ಕಡ್ಡಿ ಮುರಿದಂತೆ ಹೇಳಲು ನಾಗಮ್ಮ ರೆಡಿ. ಆದರೆ ಮಗಳು ಅವನಿಗೆ ಮನಸ್ಸು ಕೊಟ್ಟುಬಿಟ್ಟಿದ್ದಾಳೆ. ಹಾಗಲ್ಲ, ಹೀಗೆ.. ಎಂದು ಬುದ್ಧಿ ಹೇಳಲು ಹೋದರೆ ಮಕ ದಪ್ಪ ಮಾಡಿಕೊಳ್ಳುತ್ತಾಳೆ. ಹೊಟ್ಟೆಯಲ್ಲಿ ಹುಟ್ಟಿದವುಗಳೇ ಆದರೂ ಇವು ಎರಡು ಅಲುಗಿನ ಕತ್ತಿ ಇದ್ದ ಹಾಗೆ ಎಂದು ನಾಗಮ್ಮನಿಗೆ ಅನಿಸತೊಡಗಿದೆ. ಯಾವ ಕಡೆ ಹಿಡಿಯಲು ಹೋದರೂ ಕಷ್ಟ.

ಕೊಟ್ಟಿಗೆಗೆ ಹೋಗಿ ಹಾಲು ಕರೆದುಕೊಂಡು ಬರುವ ಕೆಲಸ ಬಾಕಿ ಇಟ್ಟುಕೊಂಡು ಮಗನ ಹಾದಿ ನೋಡುತ್ತಿದ್ದ ನಾಗಮ್ಮನ ತಲೆಯಲ್ಲಿ ಮಿಂಚು ಹೊಳೆದಂತೆ ಮತ್ತೊಂದೇನೋ ಹೊಳೆದುಬಿಟ್ಟಿತು. ಹಸೆಮಣೆಯ ಮೇಲೆ ಅಪ್ಪನೂ ಕೂತು ಧಾರೆ ಎರೆದು ಕೊಡಬೇಕು ಎನ್ನುವ ಬೀಗರ ಕೇಳಿಕೆಯಲ್ಲಿ ಮುಂದಾಲೋಚನೆಯೇನಾದರೂ ಉಂಟಾ? ಅಪ್ಪನ ಮನೆಯಿಂದ ಮಗಳ ಪಾಲಿಗೆ ಸಲ್ಲತಕ್ಕದ್ದು ಬರಲಿ ಎನ್ನುವ ಆಸೆಬುರುಕುತನ? ಆ ಅಪ್ಪ ವಿಚ್ಛೇದನ ತೆಗೆದುಕೊಂಡಿಲ್ಲ, ಮತ್ತೊಂದು ಮದುವೆಯಾಗಿಲ್ಲ ಎನ್ನುವುದನ್ನು ಗೊತ್ತು ಮಾಡಿಕೊಂಡಿದ್ದಾರೆ. ಅಂದ ಮೇಲೆ ಅಲ್ಲಿನ ಆಸ್ತಿಯಲ್ಲಿ ಈ ಮಕ್ಕಳಿಗೆ ಪಾಲು ಸಲ್ಲಲೇ ಬೇಕಲ್ಲ? ಈಗ ಹೆಣ್ಣುಮಕ್ಕಳಿಗೂ ಆಸ್ತಿಯಲ್ಲಿ ಪಾಲಿದೆ ಅಂತಾದ ಮೇಲೆ ಸಿಕ್ಕಷ್ಟು ಸಿಗಲಿ ಎಂದು ಅವರು ಗಾಳ ಹಾಕಿದರೆ ಆಶ್ಚರ್ಯ ಇಲ್ಲ. ಕೋರ್ಟ್, ಕಚೇರಿ ಎನ್ನುವ ರಗಳೆಯಾಗದೆ ಸುಲುಭದಲ್ಲಿ ಸಿಗುವುದಾದರೆ ಯಾರಿಗೆ ಬೇಡ? ಜನ ಯಾವ್ಯಾವ ರೀತಿಯಲ್ಲಿ ಯೋಚಿಸುತ್ತಾರೆ ಎಂದು ಅರ್ಥ ಮಾಡಿಕೊಳ್ಳುವುದು ಕಷ್ಟ. ಮದುವೆಯ ನೆಪದಲ್ಲಿ ಅಪ್ಪ, ಮಕ್ಕಳಲ್ಲಿ ರಾಜಿಯಾದರೆ ಈಗಿನಿಂದಲೇ ಗಿಟ್ಟುವಷ್ಟು ಗಿಟ್ಟುತ್ತದೆ.

ಮುಂದೆಂದೋ ಒಂದು ದಿನ ಪಾಲು ಸಿಗಬಹುದು. ಆದರೆ ಈಗಿಂದಲೇ ಹಕ್ಕುದಾರಿಕೆ ಸ್ಥಾಪಿಸಿಕೊಂಡು ಹಕ್ಕು ಬಳಕೆ ಇಟ್ಟುಕೊಂಡರೆ ಲಾಭ ಆಗುವುದು ತಮಗೇ ಎಂದು ಅವರು ಯೋಚಿಸದೆ ಇರುತ್ತಾರೆಯೇ? ಕ್ಷಣಾರ್ಧದಲ್ಲಿ ನಾಗಮ್ಮನ ಮನಸ್ಸು ಏನೆಲ್ಲಾ ಗುಡ್ಡ ಗುಣಿಸಿಬಿಟ್ಟಿತು ಅಂದರೆ ಬೀಗರು ತಮ್ಮ ಮನೆಗಿಂತಾ ಆ ಮನೆಗೇ ಹೆಚ್ಚು ಬಳಕೆಯಾಗಿ, ಮಕ್ಕಳಿಗೂ ಅಪ್ಪ ಅಂದರೆ ವಿಶ್ವಾಸ ಹೆಚ್ಚಾಗಿ, ತಾನು ಮೂಲೆಗುಂಪಾಗುವ ಸಾಧ್ಯತೆ ನೆನೆದು ನಾಗಮ್ಮ ತಂಪು ಹವೆಯಲ್ಲೂ ಬೆವರಿದಳು. ಒಂದು ವೇಳೆ ಆ ಪುಣ್ಯಾತ್ಮ ಮದುವೆಗೆ ತಾನು ಬರುವುದಿಲ್ಲ ಎಂದು ಹಟ ಹಿಡಿದರೆ ಅದೇ ಒಳ್ಳೆಯದೇನೋ ಎಂದೂ ಅನಿಸಿತು. ಹೆಚ್ಚು ಅಂದರೆ ಏನಾಗುತ್ತದೆ? ಮದುವೆ ಮುರಿದು ಬೀಳುತ್ತದೆ. ಮುರಿದು ಬೀಳುತ್ತದೆಯಾ? ಆ ಹುಡುಗ ಕೂಡಾ ತಮ್ಮ ಹುಡುಗಿಯನ್ನು ಮನಸಾರೆ ಮೆಚ್ಚಿದ್ದಾನೆ. ಅವನನ್ನು ಕಡೆಗಣಿಸಿ ಮದುವೆ ಮುರಿದುಕೊಳ್ಳುವ ಧೈರ್ಯ ತೋರಿಸುತ್ತಾರೆಯೇ? ಯಾರಿಗೆ ಗೊತ್ತುಂಟು? ತನ್ನ ಯೋಚನಾ ಧಾಟಿ ಸಾಗುತ್ತಿರುವ ದಿಕ್ಕು ನೆನೆದು ತಲೆ ಕೊಡಕಿಕೊಂಡಳು ನಾಗಮ್ಮ. ಒಬ್ಬ ತಾಯಿಯಾಗಿ ತಾನು ಹೀಗೆ ಕೆಟ್ಟದ್ದನ್ನು ಯೋಚಿಸಬಾರದು. ಮಗಳಿಗೆ ಒಳ್ಳೆಯದಾಗಲಿ. ಅವಳು ಸುಖವಾಗಿರಲಿ ಎಂದು ಹಾರೈಸಬೇಕೇ ವಿನಾ ಕೆಟ್ಟದ್ದನ್ನು ಕಲ್ಪಿಸುವುದು ಕೂಡಾ ಪಾಪ..

'ಹೋದರೆ ಹೋದಲ್ಲೇ ಗೂಟ ಹೊಡ್ಕಂಡು ಕೂತ್ಬಿಡೋದಾ? ಮನೇಲಿ ತುದಿಗಾಲಲ್ಲಿ ನಿಂತು ಕಾಯ್ತಿರ್ತಾರೆ ಅನ್ನೋ ಜ್ಞಾನ ಬೇಡ್ವಾ?'

ತುಟಿಯಂಚಿನೊಳಗೆ ಗೊಣಗುಟ್ಟಿಕೊಳ್ಳುತ್ತಾ ಹಾಲು ಕರೆದುಕೊಂಡು ಬರಲು ಸ್ಟೀಲ್ ಕೌಳಿಗೆ ಹಿಡಿದು ಅಣಿಯಾದಳು ನಾಗಮ್ಮ. ತನ್ನ ಕೆಲಸ ಬಿಟ್ಟು ಕೂತರೆ ಮತ್ಯಾರಾದರೂ ಮಾಡಿಕೊಡುತ್ತಾರಾ? ಕೊಟ್ಟಿಗೆ ಕೆಲಸ ಮಾಡಿ ಮಗಳಿಗೆ ಅಭ್ಯಾಸವೇ ಇಲ್ಲ. ಮುದ್ದು ಮಾಡಿ ತಲೆಯ ಮೇಲಿಟ್ಟುಕೊಂಡು ಬೆಳೆಸಿದ್ದು ಅವಳ ಅಜ್ಜ, ದೊಡ್ಡಮ್ಮ. ತನ್ನಪ್ಪನಿಗಿಂತಾ ಹೆಚ್ಚಾಗಿ ಅಮ್ಮನೇ..

'ಹಳ್ಳಿಮನೆ ಕೆಲಸಾನೂ ಕಲ್ತಿರ್ಬೇಕು ಕಣೇ. ಹಳ್ಳೀಲಿರೋ ಗಂಡ ಸಿಕ್ಕಿದ್ರೆ ಏನ್ಮಾಡ್ತಿ? ಆಮೇಲೆ ಮಂಗಳಾರತಿ ಆಗೋದು ನನ್ನ ಮಕಕ್ಕೇ.. ಅಮ್ಮ ಕೂಡಾ ತನ್ನ ಕುರಿತು ಹೀಗೇ ಹೇಳುತ್ತಿದ್ದಳಲ್ಲವಾ? ತಾನು ಅವವೇ ಮಾತಿನಿಂದ ಮಕ್ಕಳನ್ನು ಬೈಯುವುದು, ಮುದ್ದಿಸುವುದು ಮಾಡುತ್ತಿದ್ದೇನಾ?' ಮಗಳು ಮಾತಲ್ಲಿ ಕಮ್ಮಿ ಇಲ್ಲ.

'ಹೋಗೇ, ಹಳ್ಳೀಲಿರೋರನ್ನ ನಾನ್ಯಾಕೆ ಮದುವೆ ಆಗ್ಲಿ?' ಮುಖ, ಮೂತಿ ನೋಡದೆ ಉತ್ತರಿಸುತ್ತಿದ್ದಳು. ತಮ್ಮ ಕಾಲ ಇದಲ್ಲ. ತಾವು ಅಂದುಕೊಂಡಿದ್ದನ್ನು ಹಟ ಮಾಡಿ ಸಾಧಿಸಿಕೊಳ್ಳುವಷ್ಟು ಈಗಿನ ಹುಡುಗಿಯರು ಜೋರಾಗಿದ್ದಾರೆ. ಅದಕ್ಕೆ ಸಮನಾಗಿ ಕಾಲ ಕೂಡಾ ಬದಲಾಗಿ ಆಯ್ಕೆಯ ಹಕ್ಕು ಹುಡುಗಿಯರ ಕೈಗೆ ಸಿಕ್ಕಿಬಿಟ್ಟಿದೆ..

ನೆಪಕ್ಕೆ ಟೀವಿಯ ಮುಂದೆ ಸ್ಥಾಪನೆಯಾಗಿದ್ದರೂ ಮಗಳೂ ಕೂಡಾ ತನ್ನಂತೆಯೇ, ಅಥವಾ ತನಗಿಂತ ಹೆಚ್ಚಿನ ಉತ್ಕಂಠತೆಯಿಂದ ತಮ್ಮನ ದಾರಿ ಕಾಯುತ್ತಿದ್ದಾಳೆ ಎಂದು ನಾಗಮ್ಮನಿಗೆ ಗೊತ್ತಿದೆ. ಇನ್ನೇನು ಸೀರೆನೆರಿಯನ್ನು ಮೇಲೆತ್ತಿ ಸಿಕ್ಕಿಸಿ ಕೊಟ್ಟಿಗೆಗೆ ಹೊರಡಬೇಕು, ಮಗಳು ಜೋರಾಗಿ ಕರೆದಳು,

'ಅಮ್ಮಾ, ಪದ್ನಾಭ ಬಂದ ಕಣೇ..'

* * *

ಚಪ್ಪೆಚಪ್ಪೆಯಾಗಿತ್ತು ಪದ್ಮನಾಭನ ಮುಖ. ಕಾಲೆಳೆದು ಹಾಕುತ್ತಾ ಎನ್ನುವಂತೆ ಉದಾಸ ನಡಿಗೆಯಲ್ಲಿ ಮುಂಚೇಕಡೆಯ ಮೆಟ್ಟಿಲು ಹತ್ತಿದವನು ಉಸ್ಸೆನ್ನುತ್ತಾ ಹೆಗಲ ಚೀಲವನ್ನು ಮೇಜಿನ ಮೇಲೆಸೆದು ಮೂಲೆಗೆ ಹೋಗಿ ಮೆಟ್ಟು ಕಳಚಿದ. ಅವನ ಮುಖ ನೋಡಿಯೇ ಅಮ್ಮ, ಮಗಳಿಗೆ ನಡೆದಿದ್ದೇನು ಎಂಬುದರ ಅರಿವಾಗಿಬಿಟ್ಟಿತು. ನಾಗಮ್ಮನ ಎದೆ ಧಸಕ್ಕೆಂದರೆ ಪೂರ್ಣಿಮನ ಕಣ್ಣಲ್ಲಿ ಗಂಗಾ ಭವಾನಿ ಇನ್ನೇನು ಪ್ರತ್ಯಕ್ಷಳಾಗಿ ಬಿಡುತ್ತಾಳೆ ಎನ್ನುವಂತಾ ಶೋಕದ ಛಾಯೆ. 'ಗೊತ್ತಿತ್ತು ನಂಗೆ..' ಎಂದಳು ನಾಗಮ್ಮ. ಕುರ್ಚಿಯ ಮೇಲೆ ಕೂತ ಪದ್ಮನಾಭ ಹೆಬ್ಬೆರಳೆತ್ತಿ ತುಟಿಯ ಬಳಿಗೊಯ್ದು ನೀರು ಎನ್ನುವಂತೆ ಸೈಗೆ ಮಾಡಿದ.

'ಮೊದಲು ಏನಾಯ್ತು ಅಂತ ಬಾಯ್ಬಿಟ್ಟು ಹೇಳು. ನೀರು ಗೀರು ಆಮೇಲೆ' ಸಿಡುಕಿದಳು ನಾಗಮ್ಮ.

'ಹೇಳೋಕೇನಿದೆ? ಎಂತದೂ ಇಲ್ಲ..'

'ಮನೆ ಸಲೀಸಾಗಿ ಸಿಕ್ತನೋ? ಮನೇಲಿದ್ದೋರು ಸಿಕ್ಕಿದ್ರು ತಾನೇ?'

'ಮನೆ ಎಲ್ಲಿಗೆ ಹೋಗಿರುತ್ತೆ? ಇದ್ದಲ್ಲೇ ಇತ್ತು. ಇರಬೇಕಾದೋರೂ ಮನೆಯಲ್ಲಿದ್ರು..'

'ಏನಂದ್ರು?'

'ಒಂದು ಹೇಳಿ ಒಂದು ಬಿಡ್ಲಿಲ್ಲ. ನಂಗೇನು ಮಾನ ಮರ್ಯಾದೆ ಇಲ್ಲ